ಇ) ಬಂದಿದ್ದಲ್ಲಿ, ಯಾವ ಯಾವ ಹುದ್ದೆಗಳನ್ನು ಭರ್ತಿ ಮಾಡಲು ಆಹ್ವಾನಿಸಲಾಗಿತ್ತು. ಹುದ್ದೆವಾರು, ಜಿಲ್ಲಾವಾರು ಪ್ರಕರಣದ ವಿವರ ಒದಗಿಸುವುದು;

ಈ) ನೇಮಕಾತಿಗೆ ಅನುಮತಿ ಸಿಕ್ಕಿದ್ದು ಯಾವಾಗ, ನೇಮಕಾತಿ ಪ್ರಕ್ರಿಯೆ ಮುಗಿದು ನೇಮಕದ ಆದೇಶ ಹೊರಬಿದ್ದದ್ದು ಯಾವಾಗ;

ಉ) ಈಗ ಎಷ್ಟು ಹುದ್ದೆಗಳನ್ನು ನೇಮಕಾತಿ ಮಾಡಲಾಗಿದೆ. ನೇಮಕಾತಿಗೆ ಅನುಸರಿಸಿದ ಮಾನದಂಡಗಳೇನು;

ಊ) ಉಳಿದ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲು ಸರ್ಕಾರ ವಿಳಂಬ ನೀತಿಯನ್ನು ಅನುಸರಿಸುತ್ತಿದೆ ಏಕೆ;

ಋ) ಈ ಅಕ್ರಮ ನೇಮಕ ಪ್ರಕರಣದಲ್ಲಿ ಭಾಗಿಯಾಗಿರುವವರು ಯಾರು, ಇಂತಹವರ ಮೇಲೆ ಯಾವ ಕ್ರಮವನ್ನು ಸರ್ಕಾರ ಕೈಗೊಳ್ಳುವುದು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಕರ್ನಾಟಕ ರಾಜ್ಯದಲ್ಲಿನ ವಿವಿಧ ಸರ್ಕಾರಿ ಇಲಾಖೆಗಳು/ನಿಗಮ/ಮಂಡಳಿಗಳು/ವಿಶ್ವವಿದ್ಯಾನಿಲಯಗಳು/ಸಹಕಾರಿ ಸಂಸ್ಥೆಗಳು/ಅನುದಾನಿತ ಸಂಸ್ಥೆಗಳಲ್ಲಿ ದಿನಾಂಕ 30.6.2003 ರಲ್ಲಿದಂತೆ ಒಟ್ಟು 16975 ಬ್ಯಾಕ್‌ಲಾಗ್ ಹುದ್ದೆಗಳನ್ನು ಗುರುತಿಸಲಾಗಿದೆ.

ಆ) ಇಲ್ಲ.

ಇ) ಸಮಾಜ ಕಲ್ಯಾಣ ಇಲಾಖೆಯಿಂದ ಜಿಲ್ಲಾವಾರು ಬ್ಯಾಕ್‌ಲಾಗ್ ಹುದ್ದೆಗಳನ್ನು ನೇಮಕ ಮಾಡಿರುವುದಿಲ್ಲ. ರಾಜ್ಯದ ಎಲ್ಲಾ ಇಲಾಖೆ/ನಿಗಮ/ಮಂಡಳಿ/ವಿಶ್ವವಿದ್ಯಾನಿಲಯ/ಸಹಕಾರಿ ಸಂಸ್ಥೆಗಳಲ್ಲಿ ಒಟ್ಟು 14439 ಬ್ಯಾಕ್‌ಲಾಗ್ ಹುದ್ದೆಗಳನ್ನು ಪ್ರಕಟಿಸಲಾಗಿದೆ. 2504 ಹುದ್ದೆಗಳು ಮುಂದೆ ಉದ್ಭವಿಸಲಿರುವ ಹುದ್ದೆಗಳನ್ನು ಭರ್ತಿ ಮಾಡಲು ಕಾಯ್ದಿರಿಸಲಾಗಿದೆ.

ಈ) ಪ್ರಶ್ನೆ (ಆ)ಕ್ಕೆ ನೀಡಲಾದ ಉತ್ತರದಿಂದಾಗಿ, ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಮೇಲಿನಂತೆ

ಊ) ಮೇಲಿನಂತೆ

ಋ) ಮೇಲಿನಂತೆ

ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳು ಉತ್ಪಾದಿಸಿದ ಸಕ್ಕರೆ ಕುರಿತು

325 (2791) : ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿನ ಸಕ್ಕರೆ ಕಾರ್ಖಾನೆಗಳು 2002–03ನೇ ಸಾಲಿನಲ್ಲಿ ಉತ್ಪಾದಿಸಿದ ಸಕ್ಕರೆ ಪ್ರಮಾಣ ಹಾಗೂ ಅದರ ಮೌಲ್ಯವೆಷ್ಟು?

ಆ) ಹಾಗೆ ಉತ್ಪಾದಿಸಿದ ಸಕ್ಕರೆಯು ಸಕ್ಕರೆ ಕಾರ್ಖಾನೆಗಳ ದಾಸ್ತಾನಿನಲ್ಲಿ ಇರುವ ಹಾಗೂ ಕಾರ್ಖಾನೆಗಳು ಮಾರಾಟ ಮಾಡಿರುವ ಸಕ್ಕರೆಯ ಪ್ರಮಾಣವೆಷ್ಟು?

ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ)

ಅ) 2002–03ನೇ ಸಾಲಿನಲ್ಲಿ ದಿನಾಂಕ: 30.6.2003ರ ಅಂತ್ಯಕ್ಕೆ ರಾಜ್ಯದಲ್ಲಿನ ಸಕ್ಕರೆ ಕಾರ್ಖಾನೆಗಳು ಉತ್ಪಾದಿಸಿದ ಸಕ್ಕರೆ ಪ್ರಮಾಣ 18,04,321 ಮೆಟ್ರಿಕ್ ಟನ್ ಇರುತ್ತದೆ. ಇದರ ಮೌಲ್ಯ ಸುಮಾರು ರೂ. 1985.00 ಕೋಟಿ ಆಗಬಹುದು.

ಆ) ಉತ್ಪಾದಿಸಿರುವ ಒಟ್ಟು ಸಕ್ಕರೆ ಪ್ರಮಾಣದಲ್ಲಿ ಕಾರ್ಖಾನೆಗಳು ಮಾರಾಟ ಮಾಡಿರುವ ಪ್ರಮಾಣ ಹಾಗೂ ದಾಸ್ತಾನಿರುವ ಪ್ರಮಾಣ ಈ ಕೆಳಗಿನಂತಿದೆ.

1. ಸಕ್ಕರೆ ಮಾರಾಟ ಮಾಡಿರುವ ಪ್ರಮಾಣ 5,44,343 ಮೆ.ಟ
2. ಸಕ್ಕರೆ ದಾಸ್ತಾನು ಪ್ರಮಾಣ 12,59,978 ಮೆ.ಟ

ರಾಜ್ಯದಲ್ಲಿ ಹೈನು ಅಭಿವೃದ್ಧಿ ಯೋಜನೆಗೆ ಅನುದಾನ ಕೋರಿ ಕೇಂದ್ರಕ್ಕೆ ಪ್ರಸ್ತಾವನೆ

2262 (2844) : ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೈನು ಅಭಿವೃದ್ಧಿ ಯೋಜನೆಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಬಿಡುಗಡೆ ಮಾಡಿರುವ ಹಣ ಎಷ್ಟು; (ಕಳೆದ ಮೂರು ವರ್ಷಗಳ ವಿವರ ನೀಡುವುದು);

ಆ) ಈ ಹಣದಲ್ಲಿ ಯಾವ ಕಾರ್ಯ ಕ್ರಮದಡಿ ಎಷ್ಟು ಹಣ ವೆಚ್ಚ ಮಾಡಲಾಗಿದೆ;

ಇ) ರಾಜ್ಯ ಸರ್ಕಾರ ಈ ಯೋಜನೆಯಡಿ ವೆಚ್ಚ ಮಾಡಿರುವ ಕೇಂದ್ರದ ಹಣ ಬಳಕೆ ಪ್ರಮಾಣ ಪತ್ರವನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಲ್ಲದಿರುವುದು ನಿಜವೇ? ಹಾಗಿದ್ದಲ್ಲಿ ಕಾರಣವೇನು;

ಈ) ಈ ಸಾಲಿನಲ್ಲಿ ಮತ್ತೆ ಅನುದಾನ ಕೋರಿ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆಯೇ ಹಾಗಿದ್ದಲ್ಲಿ ಹಣ ಬಿಡುಗಡೆಯಾಗಿದೆಯೇ?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) ರಾಜ್ಯ ಸರ್ಕಾರದಿಂದ ವಿವಿಧ ಯೋಜನಾ ಕಾರ್ಯಕ್ರಮಗಳಿಗಾಗಿ ಕಳೆದ ಮೂರು ವರ್ಷಗಳಲ್ಲಿ ವಿವಿಧ ಯೋಜನಾ ಕಾರ್ಯಕ್ರಮಗಳಿಗಾಗಿ ಬಿಡುಗಡೆಯಾಗಿರುವ ಹಣದ ವಿವರ ಈ ಕೆಳಕಂಡಂತಿದೆ.

2000–01ನೇ ಸಾಲಿನಲ್ಲಿ ರೂ. 120.00 ಲಕ್ಷಗಳು
2001–02ನೇ ಸಾಲಿನಲ್ಲಿ ರೂ. 170.00 ಲಕ್ಷಗಳು
2002–03ನೇ ಸಾಲಿನಲ್ಲಿ ರೂ. 244.25 ಲಕ್ಷಗಳು

ಒಟ್ಟು ರೂ. 534.25 ಲಕ್ಷಗಳು

ಇದರ ಪೈಕಿ ಮೇಲಿನ ಮೂರು ವರ್ಷಗಳಲ್ಲಿ ಒಟ್ಟು ರೂ. 290 ಲಕ್ಷಗಳು ಬಿಜಾಪುರ ಮತ್ತು ಗುಲ್ಬರ್ಗಾ ಹಾಲು ಒಕ್ಕೂಟಗಳಿಗೆ ಪುನಃಶ್ಚೇತನ ಕಾರ್ಯಕ್ರಮದಡಿಯಲ್ಲಿ ರಾಜ್ಯ ಸರ್ಕಾರದಿಂದ ಬಿಡುಗಡೆಯಾಗಿರುತ್ತದೆ. ಇದಕ್ಕೆ ಸರಿಸಮಾನ ಮೊತ್ತವಾದ ರೂ. 290.00 ಲಕ್ಷ ಕೇಂದ್ರ ಸರ್ಕಾರದಿಂದ ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿ ಮುಖಾಂತರ ಈ ಒಕ್ಕೂಟಗಳ ಪುನಃಶ್ಚೇತನಕ್ಕಾಗಿ ಬಿಡುಗಡೆಯಾಗಿರುತ್ತದೆ.

ಆ) ಈ ಹಣದಲ್ಲಿ

ಪಶು ಆರೋಗ್ಯ ರಕ್ಷಣೆಗಾಗಿ	ರೂ. 17.50 ಲಕ್ಷ
ತರಬೇತಿ ಮತ್ತು ವಿಸ್ತರಣೆಗಾಗಿ	ರೂ. 21.00 ಲಕ್ಷ
ಹಾಲು ವರ್ಧಿಸುವ ಕಾರ್ಯಕ್ರಮ	ರೂ. 14.00 ಲಕ್ಷ
ಮೂಲಭೂತ ಸೌಕರ್ಯಕ್ಕಾಗಿ	ರೂ. 191.75 ಲಕ್ಷ
ಹಾಲು ಒಕ್ಕೂಟಗಳ ಪುನಃಶ್ಚೇತನಕ್ಕಾಗಿ	ರೂ. 219.00 ಲಕ್ಷ
ಒಟ್ಟು ಮೊತ್ತ ರೂ.	**534.25 ಲಕ್ಷಗಳನ್ನು ವೆಚ್ಚ**

ಮಾಡಲಾಗಿದೆ.